
# ಗರತಿ - ಗಯ್ಯಾಳಿ




ಜಗುಲಿಯ ಮೇಜಿಗೆ ಭೂಷಣವಾಗಿ
ಸಂಭ್ರಮ – ಅಂತಸ್ತಿನ ಪ್ರತೀಕವಾಗಿ
ಊರು – ಕೇರಿ ಕೇಳುವಂತಹ ಕರೆ
ಕಾಯುವುದೂ – ಅನಿವಾರ್ಯ ಕರ್ಮ ಆಗ
ಅಕ್ಕಪಕ್ಕದವರ ಅವಸರಕೂ ಒದಗಿ
ಬರಬರುತ್ತ ಹಬ್ಬ ಹರಿದಿನಗಳಿಗೂ ಕರೆ ಕುಂತಲ್ಲೇ
ನಿತ್ಯ ಕರ್ಮಗಳ ವಿಚಾರಣೆ ಬೇರೆ ಪುರುಸೊತ್ತಿನಲ್ಲಿ
ಪತ್ರ ಸಂಸ್ಕೃತಿಯ ಕೊಂದು ಮುಗುಮ್ಮಾಗಿ ಮತ್ತೀಗ
ಸದ್ಯಕ್ಕೆ ಸೆರಗು ಹೊದ್ದ ಗರತಿ!

ಹೊಸ ಪೀಳಿಗೆಯ ಕೈಯೊಳಗಿನ ಪುಳಕ
ಸ್ವಾತಂತ್ರ್ಯದ ಖುಷಿ ಕಾಯಬೇಕಿಲ್ಲ
ಒತ್ತುವುದರಿಂದ ಸವರುವುದಕ್ಕೆ ಬಡ್ತಿ ಬೇರೆ
ಮತ್ತಲ್ಲಿ ಹಿಂಡು ಹಿಂಡಿನ ಮಾತುಕತೆ
ಪಿಸುನುಡಿಗಳಿಗೆ ತಕ್ಕ ಸನ್ನೆ
ಸಾಲದ್ದಕ್ಕೆ ಮೆಸೇಜುಗಳ ಮೆರವಣಿಗೆಯ ಚಕ್ರ
ಅಡಿಯಲ್ಲಿ ಅಕ್ಷರಗಳೇ ದಿಕ್ಕೆಟ್ಟ ಸ್ಥಿತಿ
ಅರ್ಥವಾದರೆ ಸಾಕೆಂಬ ಧಿಮಾಕು ನೋಡಿ
ಅಂಗೈಯಲ್ಲೇ ಪೂರ್ಣ ಪ್ರಪಂಚ
ಪುರುಸೊತ್ತಿಲ್ಲ ಕಿವಿಗೆ ಕೈಗೆ ಕಣ್ಣಿಗೆ
ಸಂಬಾಳಿಸುವುದು ಕಷ್ಟ – ದಿನಕ್ಕೊಂದು ರೂಪ
ವನಪು ಒಯ್ಯಾರ ಲೆಕ್ಕ ತಪ್ಪಿದರೆ ಎಡವಟ್ಟು!
ಗುಟ್ಟೆಲ್ಲ ಹರಾಜಿಗಿಟ್ಟ ಸರಕು – ಒಟ್ಟಾರೆ ಸದಾ
ಅವರವರಿಷ್ಟಕ್ಕನುಸಾರವಾಗಿ ಉಲಿಯುವ
ನಿತ್ಯ ನವ ನಯನೋತ್ಸವದ ಗಯ್ಯಾಳಿ!

● **ರವೀಂದ್ರ ಭಟ್ಟ ಕುಳಿಬೀಡು**